


ಹೊಸ್ತಿಲಿಗೆ ಕುಂಕುಮವಿಟ್ಟು ಒಂದೆರಡು ಹೂಗಳನ್ನಿರಿಸುವಾಗ ಎದುರು ಮನೆಯತ್ತ ತಿರುಗಿ ನೋಡುತ್ತಾಳೆ ಪಂಕಜ. ಮಧ್ಯಮ ವಯಸ್ಸಿನ, ಸ್ಥೂಲಕಾಯದ ಬಿಳಿ ಮೈನ ಹೆಂಗಸೊಬ್ಬಳು ತನ್ನಂತೆಯೇ ಹೊಸ್ತಿಲ ಪೂಜೆ ಮಾಡುತ್ತಿರುವುದು ಗಮನಸೆಳೆಯುತ್ತದೆ. ರಾತಿಯೆಲ್ಲಾ ಮನೆಗೆ ಸಾಮಾನು ಸರಂಜಾಮುಗಳನ್ನು ಸಾಗಿಸಿ ಗದ್ದಲವೆಬ್ಬಿಸಿ ತಮ್ಮಗಳ ನಿದ್ರಾಭಂಗಕ್ಕೆ ಕಾರಣವಾದ ಹೊಸಬರ ಬಗ್ಗೆ ಅರೆಕ್ಷಣ ಕೋಪ ಬಂದರೂ ಕುತೂಹಲವೂ ಅರಳುತ್ತದೆ. ಮಾತನಾಡಿಸಲು ಬಿಂಕ ಅಡ್ಡ ಬರುತ್ತದೆ.

ಎರಡು ದಿನಗಳ ಹಿಂದೆ ಮನೆಗೆ ಸುಣ್ಣ ಬಣ್ಣ ಹಚ್ಚಿಸಲು ಬಂದ ಆ ಮನೆಯ ಮಾಲೀಕ ಶರಭಣ್ಣ ಅಮ್ಮನ ಬಳಿ ಇವರ ಬಗ್ಗೆ ಸಾಕಷ್ಟು ವರದಿ ಒಪ್ಪಿಸಿರುತ್ತಾನೆ. ಗಂಡ ಹೆಂಡತಿ ಇಬ್ಬರೂ ಕಚೇರಿಯೊಂದರಲ್ಲಿ ಉದ್ಯೋಗಿಗಳು. ತುಮಕೂರಿನಿಂದ ವರ್ಗವಾಗಿ ಬಂದಿದ್ದಾರಂತೆ. ಮನೆಯಾತನ ತಮ್ಮ ಮೆಡಿಕಲ್ ಓದುತ್ತಿದ್ದಾನಂತೆ. ಮತ್ತೇನೇನೋ ಹೇಳಿರುತ್ತಾನೆ. ಮನೆಯಾತನ ತಮ್ಮ ಅಂದ ಮೇಲೆ ಹರೆಯದ ಹುಡುಗನಾಗಿರಬೇಕು. ಮೆಡಿಕಲ್ ಓದಿಸುತ್ತಿದ್ದಾರೆಂದ ಮೇಲೆ ಶ್ರೀಮಂತರೇ ಆಗಿರುತ್ತಾರೆ. ಎದುರಿನ ಬಂಗಲೆಯಂತಹ ಮನೆಗೆ ಬಾಡಿಗೆ ಬಂದಿದ್ದಾರೆಂದ ಮೇಲೆ ಅನುಮಾನವೇ ಇಲ್ಲ. ಮೆಡಿಕಲ್ ಹುಡುಗನೆಂದ ಮೇಲೆ ಸೊಗಸುಗಾರ ಆಗಿರುತ್ತಾನೆಂಬುದೂ ಅಷ್ಟೇ ಖಾತರಿ ಅಂದುಕೊಳ್ಳುವಾಗ ಪಂಕಜಳ ಮನದಲ್ಲಿ ಕಚಗುಳಿ ಇಟ್ಟ ಅನುಭವ. ಎದುರು ಮನೆಯ ಕಡೆಯೇ ನೋಡುತ್ತಾ ಒಳ ಬರುತ್ತಾಳೆ. ಸ್ನಾನ ಮುಗಿಸಿ, ದೇವರ ಪಟಕ್ಕೆ ಕೈ ಮುಗಿದ ಶಾಸ್ತ್ರ ಮಾಡಿ, ಅಮ್ಮ ಮಾಡಿದ ಬಿಸಿಬಿಸಿ ಇಡ್ಲಿ ತಿಂದು, ಕಾಫಿ ಹೀರಿದ ಮೇಲೆ ರೂಮಿಗೆ ಬಂದು ಪುಸ್ತಕ ಹಿಡಿಯುತ್ತಾಳೆ ಪಂಕಜ.

ತಾನು ಕೂತಿರುವ ಬಲಬದಿಯ ಕಿಟಕಿಯಿಂದ ನೋಡಿದರೆ ಎದುರು ಮನೆಯ ಪೂರಾ ಚಿತ್ರ ಕಾಣುತ್ತಿರುತ್ತದೆ. ಕಿಟಕಿಯ ಸನಿಹವೇ ಕುರ್ಚಿ ಎಳೆದುಕೊಳ್ಳುತ್ತಾಳೆ. ಕಣ್ಣು ಪುಸ್ತಕದ ಮೇಲಿದ್ದರೂ ಮನವೆಲ್ಲಾ ಎದುರು ಮನೆಯ ಕಡೆ ಇರುವುದರಿಂದಲೋ ಏನೋ ಮೊದಲೇ ತಲೆಗಿಳಿಯದ ಫಿಸಿಕ್ಸ್ ವಿಪರೀತ ಬೋರ್ ಹೊಡೆಸುತ್ತದೆ. ಬಿ.ಎಸ್‌ಸಿ. ಮುಗಿದಿದ್ದರೆ 'ಜಂ' ಅಂತ ಬಿ.ಇಡಿ. ಕ್ಲಾಸಿಗಾದರೂ ಹೋಗಬಹುದಿತ್ತು. ಹೀಗೆಂದುಕೊಳ್ಳುವಾಗ ತನಗಿಂತಲೂ ಪೆದ್ದಿಯಾದ ಅನುಶ್ರೀ ಪಾಸ್ ಆಗಿ ಬಿ.ಇಡಿ. ಕ್ಲಾಸ್‌ಗೆ ಜೀನ್ಸ್ ಹಾಕಿ ಹೋಗುವ ದೃಶ್ಯ ನೆನಪಾದಾಗ ಪಂಕಜಳ ಹೊಟ್ಟೆ ತೊಳಸಿದಂತಹ ಅನುಭವ. ಎದುರುಗಡೆ ಸದ್ದಾದಾಗ ಅತ್ತ ನೋಡುತ್ತಾಳೆ. ಗಂಡ ಹೆಂಡ್ತಿರಿಬ್ಬರೂ ಹೊರಬರುತ್ತಾರೆ. ಏಳೆಂಟು ವರ್ಷದ ಕಾನ್ವೆಂಟ್ ಹುಡುಗನು ಅವರನ್ನು ಹಿಂಬಾಲಿಸಿ ಬರುತ್ತಾನೆ. ಮನೆಯಾಕೆ ಉಟ್ಟಿರುವ ರೇಶಿಮೆ ಸೀರೆ ದುಬಾರಿಯದು ಅನಿಸುವಾಗ ತಮ್ಮ ಬಳಿ ಒಂದಾದರೂ ಅಂತಹದ್ದು ಇಲ್ಲವಲ್ಲವೆಂದು ಮಂಕಾಗುತ್ತಾಳೆ. ಆ ಮನೆಯಾತ ಬೈಕ್ ಹೊರ ತಂದರೆ ಆಕೆ ಸ್ಕೂಟಿ ಹೊರತರುತ್ತಾಳೆ. ಮನೆಗೆ ಬೀಗ ಹಾಕುತ್ತಾರೆ. ಆಕೆ ನಮ್ಮ ಮನೆಯತ್ತಲೇ ಬರುವಾಗ, ಅಮ್ಮ ಬಾಗಿಲ ಬಳಿ ಬೆಣ್ಣೆಯವಳ ಹತ್ತಿರ ಚೌಕಾಸಿಗೆ ನಿಂತಿರುತ್ತಾಳೆ. ಪಂಕಜಳೀಗ ಅತ್ತಲೇ ಕಣ್ಣು ಹಾಯಿಸುತ್ತಾಳೆ.

'ಒಂದ್ನಿಮಿಷ ಇವರೆ...' ಎಂದಾಕೆ ಮಾತಿಗಾರಂಭಿಸಿದಾಗ ಇವಳು ಪುಸ್ತಕ ಬದಿಗಿಟ್ಟು ಕಿವಿ ತೆರೆಯುತ್ತಾಳೆ. 'ನೋಡಿ, ಇವನು ನಮಗಿಂತ ಬೇಗ ಮನೆಗೆ ಬಂದು ಬಿಡುತ್ತಾನೆ, ನಾವು ಆಫೀಸಿನಿಂದ ಬರೋದು ಒಂದಿಷ್ಟು ಲೇಟಾಗುತ್ತೇರಿ. ಈ 'ಕೀ' ನಿಮ್ಮ ಹತ್ತಿರ ಇಟ್ಟುಕೊಳ್ಳಿ ಪ್ಲೀಸ್. ಇವನು ಬಂದು ಕೇಳಿದರೆ ಕೊಡಿ. ಇಷ್ಟು ಉಪಕಾರ ಮಾಡ್ತೀರಾ?' ಎಂದು ಆಕೆ ಅಂಗಲಾಚುತ್ತಾಳೆ. ಆಕೆಯ ಸೌಜನ್ಯ ಪಂಕಜಳಿಗೆ ಹಿಡಿಸುತ್ತದೆ.

'ಆಯ್ತೇಳಿ, ನಾವು ಕಳ್ಕೊಳ್ಳೋದೇನೈತೆ' ಎಂದು ಅಮ್ಮ 'ಕೀ' ಪಡೆಯುತ್ತಾಳೆ. 'ತುಂಬಾ ಥ್ಯಾಂಕ್ಸ್ ರೀ ಮ್ಯಾಮ್' ಎಂದು ಅಫೀಷಿಯಲ್ ಧಾಟಿಯಲ್ಲಿ ಉದ್ಗರಿಸಿ ಹೊರಡುತ್ತಾಳೆ. ಗಂಡ ಬೈಕ್ ಏರಿದರೆ, ಮಗನೊಡನೆ ಆಕೆ ಸ್ಕೂಟಿ ಏರಿ ಹಾರಿ ಹೋಗುತ್ತಾರೆ. ಆ ಸ್ವಚ್ಛಂದ ಕುಟುಂಬವನ್ನು ನೋಡುವ ಪಂಕಜ ನಾವು ಇದ್ದೀವಿ. ಆಸೆಪಟ್ಟಿದ್ದನ್ನು ಉಡಂಗಿಲ್ಲ, ಇಷ್ಟಪಟ್ಟಿದ್ನ ತಿನ್ನಂಗಿಲ್ಲ. ತಮ್ಮ ಮಿಡ್ಲ್ ಕ್ಲಾಸ್ ಪಜೀತಿ ಬಗ್ಗೆ ನೆನೆದು ನಿಟ್ಟುಸಿರೊಂದನ್ನು ಹೊರ ಚೆಲ್ಲುವಾಗಲೆ ತಟ್ಟನೆ 'ಮೆಡಿಕಲ್ ಓದುವ ಹುಡುಗ' ಮೆದುಳಿನಲ್ಲಿ ಪಲ್ಟಿ ಹೊಡೆಯುತ್ತಾನೆ. ಅವನೆಲ್ಲಿ? ಕಾಣಲೇ ಇಲ್ವೆ ಎಂದು ಪಂಕಜ ಒಳಗೇ ತಹತಹಿಸುತ್ತಾಳೆ.

ಒಂದೆರಡು ದಿನ ಯಾವ ವ್ಯತ್ಯಾಸವೂ ಆಗದೆ ಕಳೆಯುತ್ತದೆ. ಹತ್ತು ಗಂಟೆಗೆ ಮೊದಲು ಎದುರು ಮನೆಯಾಕೆ ಗಂಡ, ಮಗನೊಡನೆ ಬಂದು ಅಮ್ಮನಿಗೋ ಹೊರಗಿದ್ದರೆ ತನಗೋ 'ಕೀ' ಕೊಟ್ಟು ವೆಹಿಕಲ್ ಏರೋದು, ಸಂಜೆ ಐದಕ್ಕೆಲ್ಲಾ ಬರುವ ಮಧು 'ಕೀ' ಪಡೆದು ಮನೆಯಲ್ಲಿರೋದನ್ನು ಪಂಕಜ ಗಮನಿಸುತ್ತಾಳೆ. ಅಮ್ಮ ಆಗಾಗ ಸಂಜೆ ಬರುವ ಮಧುವನ್ನು ಒಳಕರೆದು ತಿಂಡಿಯೋ, ಜ್ಯೂಸೋ ಕೊಡುವುದುಂಟು. ಅವನು ನನ್ನನ್ನು ಆಂಟಿ ಎಂದು ಕರೆಯುತ್ತಾನೆ. ಅದಾರು ಹೇಳಿಕೊಟ್ಟರೋ? ಅವಳಿಗಂತೂ ಮುಜುಗರವೆ. ಆ ಎದುರು ಮನೆಯಾಕೆ ಮೊದಲ ದಿನ ಬೆಣ್ಣೆಯಂತೆ ಮಾತನಾಡಿದಷ್ಟೆ ಈಗೇನಿದ್ದರೂ 'ಕೀ' ಕೊಡುವುದೆಷ್ಟೋ ಅಷ್ಟೆ. ಸಂಜೆ ಬಂದು ಮನೆ ಸೇರಿದರೆಂದರೆ ಹೊರ ಬರುವವರಲ್ಲ. ಎಂದೋ ಒಂದು ದಿನ ಕ್ಯಾಬಲ್ಲಿ ಹೋಗಿ ಮನೆಗೆ ಬೇಕಾದ ದಿನಸಿ ಸಾಮಾನುಗಳನ್ನು ತಂದದ್ದನ್ನು ನೋಡಿದ ನೆನಪು.

ನಾವಂತಲ್ಲ, ಮನೆಯ ಸುತ್ತಮುತ್ತಲಿನ ಯಾರೊಡನೆಯೂ ಬೆರೆಯದ ದೊಡ್ಡಸ್ಥಿಕೆಯ ಜನ ಅನ್ನಿಸುವಾಗ ಮಾತನಾಡಿಸಲು ಹಂಬಲಿಸುವ ಪಂಕಜಳ ಸ್ವಾಭಿಮಾನವೂ ಸೋಲದು. ಅವರ ಮನೆಯ 'ಕೀ'ಯನ್ನು ನಮಗವರು ಕೊಡುವುದರಿಂದಲೋ ಏನೋ ಅಮ್ಮನ ಬಳಿ ಬೇಕೋ ಬೇಡವೋ ಎನ್ನುವಷ್ಟು ಮಾತು. ನನ್ನನ್ನು ಕಂಡಾಗ ಒಂದೇ ಒಂದು ಶುಷ್ಕ ನಗು. ಅಮ್ಮನಿಗಂತೂ ಏನೂ ತಿಳಿಯುವುದಿಲ್ಲ ಪೆದ್ದಮ್ಮಳಂತ ಪಂಕಜ ಬೇಸರಿಸುತ್ತಾಳೆ. ಎಷ್ಟೋ ಸಲ ಎದುರು ಮನೆಯಾಕೆ ತಾನಿರುವಾಗ 'ಕೀ'